**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 230/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಿವಮ್ಮ | ಪ್ರಾಸಾಃ 1 |
| ತಂದೆಯ/ಗಂಡನ ಹೆಸರು | : | ಶಿವಮೂರ್ತಪ್ಪ | ಚಾಸಾಃ 1 |
| ವಯಸ್ಸು | : | 45 ವರ್ಷ | |
| ಕೆಲಸ | : | ವ್ಯವಸಾಯ | ಸಾ ಪ್ರ ಬೋ |
| ವಾಸ | : | ಆವಿನಹಟ್ಟಿ ಗ್ರಾಮ | ದಿಃ12.02.2026 |

**(ನ್ಯಾಯಾಲಯದ ಆವರಣದಿಂದ ಈ ಪ್ರಕರಣಕ್ಕೆ ಸಂಬಂಧಿಸಿದ ವಕೀಲರು ಮತ್ತು ಕಕಕ್ಷಿದಾರರನ್ನು ಹೊರತುಪಡಿಸಿ ಇತರೆ ಎಲ್ಲಾ ವಕೀಲರು ಮತ್ತು ಕಕ್ಷಿದಾರರನ್ನು ಹೊರಗೆ ಕಳುಹಿಸಿ ಸಾಕ್ಷ್ಯ ದಾಖಲಿಸಲಾಯಿತು.)**

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

1. ಚಾಸಾ.4 ನನ್ನ ಪತಿ. ಚಾಸಾ.5 ನಮ್ಮ ಊರಿನವರು. ನ್ಯಾಯಾಲಯದ ಮುಂದಿರುವ ಆರೋಪಿತರು ನಮ್ಮ ಪಕ್ಕದ ಮನೆಯವರು.

2. ಸುಮಾರು 3-4 ವರ್ಷಗಳ ಹಿಂದೆ ಸಂಜೆ 5.30 ರಿಂದ 6 ಗಂಟೆ ಸಮಯದಲ್ಲಿ ಆರೋಪಿತರು ನಮಗೆ ಸೇರಿದ ಜಾಗದಲ್ಲಿ ಲೆಟ್ರಿನ್ ಫಿಟ್ ಗುಂಡಿಯನ್ನು ತೆಗೆಯುತ್ತಿದ್ದರು. ಆಗ ನಾನು ಆರೋಪಿತರಿಗೆ ಏಕೆ ಇಲ್ಲಿ ಪಿಟ್ ಗುಂಡಿ ತೆಗೆಯುತ್ತೀರಿ ಎಂದು ಕೇಳಿದ್ದಕ್ಕೆ, ಆರೋಪಿತರು ನನಗೆ ಕೆಟ್ಟ ಮಾತುಗಳಿಂದ ಬೈದಿರುತ್ತಾರೆ. 1ನೇ ಆರೋಪಿ ನನ್ನ ಬಟ್ಟೆ ಹಿಡಿದು ಎಳೆದಾಡಿರುತ್ತಾರೆ. 1ನೇ ಆರೋಪಿ ನನಗೆ ಕೋಲಿನಿಂದ ತಲೆಗೆ, ಮೈಕೈಗೆ ಹೊಡೆದಿರುತ್ತಾರೆ. 2 ಮತ್ತು 3ನೇ ಆರೋಪಿತರು ನನ್ನನ್ನು ಮತ್ತು ನನ್ನ ಬಟ್ಟೆಯನ್ನು ಹಿಡಿದು ಎಳೆದಾಡಿರುತ್ತಾರೆ. 2 ಮತ್ತು 3ನೇ ಆರೋಪಿತರು ಸಹ ನನಗೆ ಕೋಲಿನಿಂದ ಹೊಡೆದಿರುತ್ತಾರೆ. ಆಗ ಚಾಸಾ.4 ಮತ್ತು 5ರವರು ಬಂದು ಗಲಾಟೆಯನ್ನು ಬಿಡಿಸಿರುತ್ತಾರೆ. ನಂತರ ನನ್ನನ್ನು ಹೊಳಲ್ಕೆರೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ನಾನು ಹೊಳಲ್ಕೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಪೊಲೀಸರು ಬಂದು ನನ್ನಿಂದ ಹೇಳಿಕೆಯ ದೂರನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿ ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿತರು ಹಲ್ಲೆ

ಮಾಡಲು ಉಪಯೋಗಿಸಿದ ಕೋಲುಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಕೋಲುಗಳನ್ನು ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**<u>ಪಾಟೀ ಸವಾಲು ಎ.ಪಿ.ಪಿ.ಯವರಿಂದಃ</u>**

3. ಎಲ್ಲಾ ಆರೋಪಿತರು ನನಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ.ವಿ.ಎನ್. ವಕೀಲರಿಂದ</u>**

4. ನಾನು ಓದಿಲ್ಲ, ಹಾಗಾಗಿ ನನಗೆ ಗಲಾಟೆ ದಿನಾಂಕದ ಕುರಿತು ಗೊತ್ತಿಲ್ಲ. ನಾನು ದೂರನ್ನು ಆಸ್ಪತ್ರೆಯಲ್ಲಿ ನೀಡಿರುತ್ತೇನೆ. ನಾನು ಸಾರ್ವಜನಿಕ ಕಾಂಕ್ರೀಟ್ ರಸ್ತೆಯಲ್ಲಿ ಶೀಟಿನ ಮನೆಯನ್ನು ಕಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಒಂದು ಹೊಸ ಮನೆಯನ್ನು ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರು ಹೊಸ ಮನೆಯನ್ನು ಕಟ್ಟಿದ್ದು, ಲೆಟ್ರಿನ್ ಫಿಟ್‌ನ್ನು ಕಟ್ಟುವಾಗ ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಸೀರೆಯನ್ನು ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನಗೆ ಕೋಲುಗಳಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ.5 ರವರು ನನಗೆ ಸಂಬಂಧಿಕಾರು ಎಂದರೆ ಸರಿ. ಚಾಸಾ.5 ರವರು ಗಲಾಟೆ ಬಿಡಿಸಲು ಬಂದಿದ್ದರು. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಯಾವುದೇ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.